ಬಿಸಿಲ ನಾಡು ಹೊಸಪೇಟೆಯವರಾದ ಲಲಿತಾ ಕೆ. ಹೊಸಪ್ಯಾಟಿ 'ಚಂದ್ರ ಚುಕ್ಕಿಗಳು' ಎಂಬ ಕಥಾ ಸಂಕಲನದ ಮೂಲಕ ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡವರು. ಲಲಿತ ಪ್ರಬಂಧ ಮತ್ತು ಕವಿತೆಗಳು ಅವರ ಮತ್ತೆರಡು ಆಸಕ್ತಿಯ ರಂಗ. ಮೃದು ಮಾತಿನ ಸಹೃದಯಿ ಲೇಖಕಿ ಶಿಕ್ಷಣ ಇಲಾಖೆಯಲ್ಲಿ ಡೆಪ್ಯುಟಿ ಪ್ಲಾನಿಂಗ್ ಕೋ ಆರ್ಡಿನೇಟರ್ ಆಗಿ ಕೆಲಸ ಮಾಡಿದವರು. ಪ್ರಸ್ತುತ ಬೆಂಗಳೂರಿನಲ್ಲಿ ನಿವೃತ್ತ ಜೀವನ ನಡೆಸುತ್ತಿದ್ದಾರೆ.

ಎಂಬ ನಾಟಕ ಮಾಡಲು ಒಪ್ಪಿದ್ದರು. ಆ ಪಾತ್ರದಲ್ಲಿ ಅಭಿನಯಿಸಬೇಕಿದ್ದ ನಾಯಕಿ ಪಾತ್ರಧಾರಿ ಬರಲಿಲ್ಲ. ನಮ್ಮ ಊರಿನ ತಂಡದವರ ಒತ್ತಾಯದ ಮೇರೆಗೆ ಒಂದೇ ದಿನದಲ್ಲಿ ಆ ಪಾತ್ರದ ಮಾತುಗಳನ್ನು ಕಲಿತು ಅಭಿನಯಿಸಿದೆ. ಚೆನ್ನಾಗಿ ಮಾಡಿದೆ ಎಂದು ಪ್ರಶಂಸಿದರು. ಅದೇ ದಿನ ನಾಟಕ ನೋಡಲು ಬಂದಿದ್ದ ಎರಡು ಹಳ್ಳಿಯವರು ತಮ್ಮ ಊರಿಗೆ ಬಂದು, ನಾಟಕದಲ್ಲಿ ಪಾತ್ರ ವಹಿಸಬೇಕು ಎಂದು ಆಹ್ವಾನಿಸಿದರು. ಅಡ್ವಾನ್ಸೂ ಕೊಟ್ಟುಬಿಟ್ಟರು. ನಾಟಕದ ನನ್ನ ವೃತ್ತಿ ಜೀವನ ಹೀಗೆ ಶುರುವಾಯಿತು. ಹೆಚ್ಚಿನ ಕಡೆಯಿಂದ ನಾಟಕಕ್ಕೆ ಆಹ್ವಾನ ಬಂತು. ಇಡೀ ರಾತ್ರಿಯೆಲ್ಲ ಕುಳಿತು ಪಾತ್ರದ ಸಂಭಾಷಣೆ ಬಾಯಿಪಾಠ ಮಾಡುವುದು ರೂಢಿ ಅನ್ನುವುದಕ್ಕಿಂತ ಸರಳವಾಗಿತ್ತು. ಆರಂಭದಲ್ಲಿಯೇ ನಿರಂತರವಾಗಿ ನಟನೆಗಾಗಿ ಕರೆ ಬರತೊಡಗಿದವು. ಪಡೆಯುತ್ತಿದ್ದ ಸಂಭಾವನೆಯಿಂದ ಮನೆಯ ಪರಿಸ್ಥಿತಿ ಸುಧಾರಿಸಿತು. ತಂಗಿಯರಿಗೆ ಬಟ್ಟೆ, ಪುಸ್ತಕ, ಅಪ್ಪನ ಕಾಯಿಲೆಗೆ ಹಣ ಎಲ್ಲವೂ ಕಲಾ ದುಡಿಮೆಯಿಂದ ಬರತೊಡಗಿತು. ಮನೆಯಲ್ಲಿ ಹೆಚ್ಚಿನ ಸಹಕಾರ ಸಿಕ್ಕಿತು. ಸಮಾಜ ನನ್ನನ್ನು ನಟಿಯಾಗಿ ಗುರ್ತಿಸಿತು. ಹಾಗಾಗಿ ನಾನು ನಾಟಕದಲ್ಲೇ ಉಳಿದುಬಿಟ್ಟೆ.

◆ **ಗ್ರಾಮೀಣ ಪ್ರದೇಶಗಳಲ್ಲಿ ನಾಟಕ ಮಾಡಲು ಒಪ್ಪಿಕೊಂಡು ಪಾತ್ರ ನಿರ್ವಹಿಸುವಾಗ ಬೇರೆ ಬೇರೆ ರೀತಿಯ ತೊಂದರೆಗಳು ಎದುರಾಗುವುದು ಸಹಜ. ಇಂತಹ ತೊಂದರೆಗಳೇನಾದರೂ ಬಂದಿದ್ದರೆ, ಗ್ರಾಮೀಣ ವೃತ್ತಿ ರಂಗ ಕಲಾವಿದೆಯಾಗಿ ನಾಟಕ ರಂಗದಲ್ಲಿ ನಿಮ್ಮ ಅನುಭವ ಏನು?ನೀವು ಎದುರಿಸಿದ ಬಗೆ ಹೇಗೆ?**

ಯಾವುದೇ ರಂಗದಲ್ಲಿರಲಿ. ಬರುವ ತೊಂದರೆಗಳನ್ನು ಎದುರಿಸಿಯೇ ಮಹಿಳೆ ತನ್ನ ಕೆಲಸದಲ್ಲಿ ಯಶಸ್ಸು ಕಾಣಲೇಬೇಕು. ಯಾರೂ ನಮಗೆ ಮಣೆ ಹಾಕಿ ಕೂಡಿಸುವುದಿಲ್ಲ. ನಮ್ಮ ರಂಗದಲ್ಲಿಯೂ ತೊಂದರೆಗಳನ್ನು ಅನುಭವಿಸಿದ್ದಿದೆ. ಒಂದು ಹಳ್ಳಿಯಲ್ಲಿ ನಾನು ನನ್ನ ಸಹಕಲಾವಿದೆಯೊಂದಿಗೆ ನಾಟಕಕ್ಕೆ ಹೋಗಿದ್ದೆ. ಊರು ತಲುಪುತ್ತಿದ್ದಂತೆ ಜೋರು ಮಳೆ. ಮಳೆಯಲ್ಲಿ ನೆನೆದುಕೊಂಡು ನಿಂತಿದ್ದ ಸಮಯದಲ್ಲಿ, ನಮ್ಮ ಬಳಿ ಅಪರಿಚಿತ ವ್ಯಕ್ತಿಯೊಬ್ಬರು ಬಂದರು. ನಾನೇ ನಾಟಕದ ತಾಲೀಮಿನ ಮನೆಗೆ ಕರೆದುಕೊಂಡು ಹೋಗುತ್ತೇನೆ ಎಂದು ನಂಬಿಸಿದರು. ನಂಬಿ ಅವನ ಹಿಂದೆ ಹೋದೆವು. ಭೂತ ಬಂಗಲೆಯಂತಹ ಮನೆಗೆ ಕರೆದೊಯ್ದು ಇಂದು ನಾಟಕ ರದ್ದಾಗಿದೆ, ಇಲ್ಲಿಯೇ ಮಲಗಿ ಎಂದರು. ಅಷ್ಟು ದೊಡ್ಡ ಮನೆಯಲ್ಲಿ ಮನುಷ್ಯರಿದ್ದ ಸುಳಿವೇ ಇಲ್ಲ. ಪಡಸಾಲೆಯಲ್ಲಿ ಕತ್ತಲ ಕರಿ ರಾತ್ರಿ. ದೂರದಲ್ಲಿ ಅವನೂ ಅಲ್ಲಿಯೇ ಮಲಗಿದ್ದ. ನಮ್ಮ ಎದೆ ಹೊಡೆದುಕೊಳ್ಳುತ್ತಿತ್ತು. ಅಷ್ಟೊತ್ತಿಗೆ ನಮ್ಮ ನಾಟಕದ ಮೇಷ್ಟ್ರಿಗೆ ವಿಷಯ ಗೊತ್ತಾಗಿ ಅಲ್ಲಿಗೇ ಬಂದರು. ಇಲ್ಲಿರುವುದು ಬೇಡ ಎಂದು ಕರೆದೊಯ್ದು, ಕಂಟಕದಿಂದ ಪಾರು ಮಾಡಿದರು.

ಮತ್ತೊಮ್ಮೆ, ಮೂವರು ಮಹಿಳಾ ಕಲಾವಿದೆಯರು ಕಲಬುರಗಿ ಬಳಿ ಯಾವುದೋ ಒಂದು ಹಳ್ಳಿಗೆ ಹೋಗಿದ್ದೆವು. ನಮ್ಮ ಕಲಾವಿದೆಯರ ಮೇಲೆ ಏನೋ ಸಂಚು ಮಾಡಿದ್ದರು. ಅದು ಹೇಗೋ ನಮಗೆ ಗೊತ್ತಾಗಿ, ದೃಶ್ಯಗಳನ್ನು ನಿಧಾನಕ್ಕೆ ಅಭಿನಯಿಸುತ್ತಾ, ಒಂದು ಪದಕ್ಕೆ ಬದಲಾಗಿ ನಾಲ್ಕು ಪದ ಹಾಡುತ್ತ ನಾಟಕವನ್ನು ಬೆಳಗಿನ ತನಕ ಮಾಡಿ ಪಾರಾದೆವು. ಇಂತಹ ಅನುಭವಗಳು ಸಾಕಷ್ಟು ಆಗಿವೆ. ನನ್ನ ಆತ್ಮಕತೆ 'ಮರಿಯಮ್ಮನಹಳ್ಳಿ ರಂಗಸಿರಿ'ಯಲ್ಲಿ ಗುಡಿಹಳ್ಳಿ ನಾಗರಾಜ ಅವರು ಇಂತಹ ಅನೇಕ ಘಟನೆಗಳನ್ನು ದಾಖಲಿಸಿದ್ದಾರೆ. ಈ ಆತ್ಮಕತೆ 'ಸುಧಾ' ವಾರಪತ್ರಿಕೆಯಲ್ಲಿ 1996ರಲ್ಲಿ ಹತ್ತೊಂಬತ್ತು ವಾರಗಳ ಕಾಲ ಧಾರಾವಾಹಿಯಾಗಿ